**ದಿನಾಂಕ:17-04-2023 ರಂದು ನಡೆದ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 59ನೇ ತಾಂತ್ರಿಕ ಸಮಿತಿ ಸಭೆಯ ನಡವಳಿಗಳು**

ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಹಾಗೂ ತಾಂತ್ರಿಕ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಇವರು ಸಭೆಯ ಅಧ್ಯಕ್ಷರು, ತಾಂತ್ರಿಕ ಸಮಿತಿಯ ಸದಸ್ಯರು, ಪ್ರಾಧಿಕಾರದ ಅಧಿಕಾರಿಗಳು, ವಿವಿಧ ಇಲಾಖೆಯ ಮತ್ತು ಸಮಾಲೋಚಕ ಸಂಸ್ಥೆಯ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಕಾರ್ಯಸೂಚಿಯಂತೆ ಮೌಲ್ಯಮಾಪನ ವರದಿಗಳ ಮುಖ್ಯಾಂಶಗಳನ್ನು ಸಮಾಲೋಚಕ ಸಂಸ್ಥೆಗಳಿಂದ ಪ್ರಸ್ತುತ ಪಡಿಸಲಾಯಿತು. ವಿವರವಾದ ಚರ್ಚೆಯ ನಂತರ ಅಧ್ಯಯನವಾರು ಸಲಹೆ/ಸೂಚನೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| **ಕರಡು ಮೌಲ್ಯಮಾಪನ ವರದಿಗಳು** | | |
|---|---|---|
| 1 | Evaluation of Jungle Lodges and Resorts from 2015-16 to 2019-20<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳು & ಆರ್ಥಿಕ ಇಲಾಖೆ<br>**ಸಮಾಲೋಚಕ ಸಂಸ್ಥೆ:** HKCAL<br><br>**ಅಧ್ಯಯನದ ಅವಧಿ**<br>27-09-2021 ರಿಂದ 27-04-2022 | ಸಮಾಲೋಚಕ ಸಂಸ್ಥೆಯಿಂದ ಪರಿಷ್ಕೃತ ಕರಡು ಮೌಲ್ಯಮಾಪನ ವರದಿಯನ್ನು ಪ್ರಸ್ತುತ ಪಡಿಸಲಾಗಿ, ಈ ಕೆಳಕಂಡ ಸಲಹೆಗಳನ್ನು ನೀಡಲಾಯಿತು.<br>1. ಹಲವು ಜಂಗಲ್ ಲಾಡ್ಜಸ್ ಗಳನ್ನು ತಲುಪಲು ರಸ್ತೆ ನಿರ್ಮಾಣದ ಕ್ರಮ ತೆಗೆದುಕೊಳ್ಳುವ ಅಂಶಕ್ಕೆ ಜಂಗಲ್ ಲಾಡ್ಜಸ್ ವಾರು ನಿರ್ಮಿಸಬೇಕಾದ ರಸ್ತೆಗಳ ನಿಖರವಾದ ಅಳತೆಗಳನ್ನು ವರದಿಯಲ್ಲಿ ಅಳವಡಿಸುವುದು.<br>2. ಜಂಗಲ್ ಲಾಡ್ಜಸ್ ಗಳ ದರಗಳನ್ನು ಹೆಚ್ಚಿಸುವು ಶಿಫಾರಸ್ಸಿಗೆ, ಜಂಗಲ್ ಲಾಡ್ಜಸ್ ಘಟಕವಾರು ಹೆಚ್ಚಿಸಬೇಕಾದ ದರಗಳನ್ನು ನಮೂದಿಸುವುದು.<br>3. ರಾಜ್ಯದ ಎಲ್ಲಾ ಜಂಗಲ್ ಲಾಡ್ಜಸ್ ಗಳ ನಿವ್ವಳ ಲಾಭವನ್ನು ಶೇ.20 ರಷ್ಟು ಹೆಚ್ಚಿಸುವ ಶಿಫಾರಸ್ಸಿಗೆ, ಸಮಾಲೋಚಕ ಸಂಸ್ಥೆಯು ಜಂಗಲ್ ಲಾಡ್ಜಸ್ ಘಟಕವಾರು ಶೇ.20 ರಷ್ಟು ಲಾಭ ಹೆಚ್ಚಿಸುವ ವಿವಿಧ ಸೌಲಭ್ಯಗಳ ದರಗಳ ಪರಿಷ್ಕರಣೆ (Pricing Mechanism) ವಿವರಗಳನ್ನು ನಮೂದಿಸುವುದು.<br>4. 57ನೇ ತಾಂತ್ರಿಕ ಸಲಹಾ ಸಮಿತಿಯಲ್ಲಿ ತಿಳಿಸಿದಂತೆ, ಇತರೆ ರಾಜ್ಯಗಳ ಅತ್ಯುತ್ತಮ ಜಂಗಲ್ ಲಾಡ್ಜಸ್ ಗಳ ಕಾರ್ಯವಿಧಾನ ಗಳನ್ನು ವಿಶ್ಲೇಷಣೆ ಮಾಡಿ, ಜಂಗಲ್ ಲಾಡ್ಜಸ್ ಗಳ ಕಾರ್ಯಕ್ಷಮತೆ ಹೆಚ್ಚಿಸುವ ನಿಯತಾಂಕಗಳನ್ನು (Parameters) ಗುರುತಿಸಿ ವರದಿಯಲ್ಲಿ ಅಳವಡಿಸುವುದು.<br>5. ಸದರಿ ಮೌಲ್ಯಮಾಪನ ಅಧ್ಯಯನದ ಎಲ್ಲಾ ಶೋಧನೆಗಳಿಗೆ (Findings) ಸ್ಪಷ್ಟ ಸರ್ಮಥನೆ ಮತ್ತು ಅಂಕಿ -ಅಂಶಗಳ ವಿಶ್ಲೇಷಣೆಯನ್ನು ವರದಿಯಲ್ಲಿ ಅಳವಡಿಸುವುದು. |

| | | |
|---|---|---|
| | | ಅಂತಿಮವಾಗಿ ಅನುಷ್ಠಾನ ಇಲಾಖೆ ಸ್ವತಂತ್ರ ಮೌಲ್ಯಮಾಪಕರ ಸಲಹೆ/ಸೂಚನೆಗಳನ್ನು ಅಳವಡಿಸಿ ಸಲ್ಲಿಸುವ ಪರಿಷ್ಕೃತ ಕರಡು ವರದಿಯನ್ನು ಇಲಾಖೆಯು ಒಪ್ಪಿದ ನಂತರ ಮೌಲ್ಯಮಾಪನ ಅಧ್ಯಯನದ ಬಾಕಿ ಹಣ ಬಿಡುಗಡೆ ಮಾಡಲು ಕ್ರಮ ವಹಿಸುವಂತೆ ಹಾಗೂ ಸದರಿ ಪರಿಷ್ಕೃತ ಕರಡು ವರದಿಯನ್ನು ಮುಂದಿನ ತಾಂತ್ರಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. |
| 2 | Impact Evaluation of Government Hostels for SC/ST/OBC students on Enrolment, Transition and Learning Outcomes in Karnataka (2014-15 to 2018-19) for attaining Targets under SDG 4 and SDG 10<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ<br>**ಸಮಾಲೋಚಕ ಸಂಸ್ಥೆ:** HKCAL<br>**ಅಧ್ಯಯನದ ಅವಧಿ:**<br>26-08-2021 ರಿಂದ 26-02-2022 | ಸಮಿತಿಯ ಮುಂದೆ ಮಂಡಿಸಲಾದ ಅಧ್ಯಯನದ ಕರಡು ಮೌಲ್ಯಮಾಪನ ವರದಿಯನ್ನು ಸಂಬಂಧ ಪಟ್ಟ ಇಲಾಖೆಗೆ ಕಳುಹಿಸಿ ಇಲಾಖೆಯ ಸಲಹೆ ಸೂಚನೆಯನ್ನು ಲಿಖಿತ ರೂಪದಲ್ಲಿ ಪಡೆದ ನಂತರ ಸಮಾಲೋಚಕ ಸಂಸ್ಥೆಗೆ ಅಧ್ಯಯನದ ಬಾಕಿ ಹಣ ಬಿಡುಗಡೆ ಮಾಡಲು ಕ್ರಮ ವಹಿಸುವಂತೆ ಹಾಗೂ ಸದರಿ ಪರಿಷ್ಕೃತ ಕರಡು ವರದಿಯನ್ನು ಮುಂದಿನ ತಾಂತ್ರಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. |
| 3 | Evaluation of Functioning of 'Anna Bhagya' Scheme and its impact on Food Security and achieving the SDG Goal -2 of Zero Hunger in Karnataka State-2013-14 to 2018-19<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ<br>**ಸಮಾಲೋಚಕ ಸಂಸ್ಥೆ:** PAN INDIA<br>**ಅಧ್ಯಯನದ ಅವಧಿ**<br>27-09-2021 ರಿಂದ 27-04-2022 | ಸಮಾಲೋಚಕ ಸಂಸ್ಥೆಯಿಂದ ಪರಿಷ್ಕೃತ ಕರಡು ಮೌಲ್ಯಮಾಪನ ವರದಿಯನ್ನು ಪ್ರಸ್ತುತ ಪಡಿಸಲಾಗಿ, ಈ ಕೆಳಕಂಡ ಸಲಹೆಗಳನ್ನು ನೀಡಲಾಯಿತು.<br>1. ಅಧ್ಯಯನ ವರದಿಯಲ್ಲಿ ಅರ್ಹರಲ್ಲದ ಫಲಾನುಭವಿಗಳ ನಿಖರವಾದ ಅಂಕಿ-ಅಂಶಗಳನ್ನು ನೀಡಲು ತಿಳಿಸಲಾಯಿತು.<br>2. ONORC-One Nation and One Ration Card (ಯೋಜನೆಯಡಿ ಫಲಾನುಭವಿಗಳು ಪಡೆಯುವ ಸೌಲಭ್ಯಗಳನ್ನು ಅಳವಡಿಸಲು ತಿಳಿಸಲಾಯಿತು.<br>3. ಕಾರ್ಮಿಕ ಇಲಾಖೆಯ ಸಮನ್ವಯದೊಂದಿಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ವತಿಯಿಂದ ಶೇ. ONORC ಮತ್ತು ಅನ್ನಭಾಗ್ಯ ಯೋಜನೆಯಡಿ ಶೇ.100 ರಷ್ಟು ವಿತರಣೆಗೆ ಕಾರ್ಯಯೋಜನೆ ರೂಪಿಸುವುದು. |

| | | |
|---|---|---|
| | | ಸರ್ಕಾರದ ಕಾರ್ಯದರ್ಶಿಗಳು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಸಮಾಲೋಚಕ ಸಂಸ್ಥೆ ಮತ್ತು ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಭೆ ಆಯೋಜಿಸಿ ಕರಡು ವರದಿಯನ್ನು ಪರಿಷ್ಕರಿಸುವ ಷರತ್ತಿಗೆ ಒಳಪಟ್ಟು ವರದಿಯನ್ನು ಅನುಮೋದಿಸಲಾಯಿತು. |
| 4 | Evaluation of Functioning of Institutional Arrangements and Rehabilitation of Women in Distress and its impact on Redressing Violence against Women and Evaluation of Implementation of Prohibition of Child Marriage Act 2006 in Karnataka<br>**ಯೋಜನೆ ಅನುಷ್ಠಾನ ಇಲಾಖೆ:**<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>**ಸಮಾಲೋಚಕ ಸಂಸ್ಥೆ:** HKCAL<br>**ಅಧ್ಯಯನದ ಅವಧಿ**<br>27-09-2021 ರಿಂದ 27-03-2022 | ಸಮಿತಿಯ ಮುಂದೆ ಮಂಡಿಸಲಾದ ಅಧ್ಯಯನದ ಕರಡು ಮೌಲ್ಯಮಾಪನ ವರದಿಯನ್ನು, ಸಂಬಂಧಪಟ್ಟ ಇಲಾಖೆ, ಸ್ವತಂತ್ರ ಮೌಲ್ಯಮಾಪಕರು ಹಾಗೂ ಪ್ರಾಧಿಕಾರದಿಂದ ನೀಡುವ ಸಲಹೆ/ಸೂಚನೆಗಳು ಹಾಗೂ ತಾಂತ್ರಿಕ ಸಮಿತಿಯು ನೀಡಿರುವ ಕೆಳಗಿನ ಸೂಚನೆಗಳನ್ನು ಅಳವಡಿಸಿ ಅನುಸರಣಾ ವರದಿಯೊಂದಿಗೆ ಪರಿಷ್ಕೃತ ವರದಿಯನ್ನು ಸಲ್ಲಿಸುವ ಷರತ್ತಿಗೆ ಒಳಪಟ್ಟು ಅನುಮೋದಿಸಲಾಯಿತು.<br>1. ಸ್ವಧಾರ ಮತ್ತು ಸ್ವೀಕಾರ ಕೇಂದ್ರಗಳಿಗೆ ನಿವಾಸಿಗಳು ಯಾವ ರೀತಿಯ ಪ್ರದೇಶಗಳಿಂದ ಬರುತ್ತಾರೆ/ಬಂದಿದ್ದಾರೆ ಎಂಬುದನ್ನು ವಿಶ್ಲೇಷಿಸಿ, ವಿವಿಧ ರೀತಿಯ ಪ್ರದೇಶಗಳ ಶೇಕಡಾವಾರು ವಿವರಗಳನ್ನು ಒದಗಿಸುವುದು.<br>2.ಮಾನಸಿಕ ಆರೋಗ್ಯದ ಸಮಾಲೋಚನೆಗಾಗಿ 'ಯುವ ಸ್ಪಂದನ' ಕಾರ್ಯಕ್ರಮದ ಉಪಯೋಗದ ಬಗ್ಗೆ ಶಿಫಾರಸ್ಸುಗಳಲ್ಲಿ ಸೇರಿಸುವುದು. |
| 5 | Evaluation of Impact of ICDS programme (including Poshan Abhiyan) in Karnataka State in terms of Improving nutritional status of women and children for promoting the achievement of nutritional targets under Sustainable Development Goal-2 for the period 2015-16 to 2020-21<br>**ಯೋಜನೆ ಅನುಷ್ಠಾನ ಇಲಾಖೆ:**<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>**ಸಮಾಲೋಚಕ ಸಂಸ್ಥೆ:** IIHMR<br>**ಅಧ್ಯಯನದ ಅವಧಿ**<br>29-03-2022 ರಿಂದ 29-09-2022 | ಸಮಿತಿಯ ಮುಂದೆ ಮಂಡಿಸಲಾದ ಅಧ್ಯಯನದ ಕರಡು ಮೌಲ್ಯಮಾಪನ ವರದಿಯನ್ನು, ಸಂಬಂಧಪಟ್ಟ ಇಲಾಖೆ, ಸ್ವತಂತ್ರ ಮೌಲ್ಯಮಾಪಕರು ಹಾಗೂ ಪ್ರಾಧಿಕಾರದಿಂದ ನೀಡುವ ಸಲಹೆ/ಸೂಚನೆಗಳು ಹಾಗೂ ತಾಂತ್ರಿಕ ಸಮಿತಿಯು ನೀಡಿರುವ ಕೆಳಗಿನ ಸೂಚನೆಗಳನ್ನು ಅಳವಡಿಸಿ ಅನುಸರಣಾ ವರದಿಯೊಂದಿಗೆ ಪರಿಷ್ಕೃತ ವರದಿಯನ್ನು ಸಲ್ಲಿಸುವ ಷರತ್ತಿಗೆ ಒಳಪಟ್ಟು ಅನುಮೋದಿಸಲಾಯಿತು.<br>1.ಮಕ್ಕಳು ತೀವ್ರ ಅಪೌಷ್ಟಿಕತೆಗೆ ಗುರಿಯಾಗಲು ಕಾರಣವಾಗಿರುವ ನಿರ್ಣಾಯಕ ಅಂಶಗಳನ್ನು ವಿಶ್ಲೇಷಿಸುವುದು.<br>2. ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಮಹಿಳೆಯರಿಗೆ ನೀಡುವ ಆಹಾರದ ಕೊರತೆಯ ಬಗ್ಗೆ ಹಾಗೂ ಮಕ್ಕಳಿಗೆ ನೀಡುವ ಲಸಿಕೆಯ ಕುರಿತು ವರದಿಯಲ್ಲಿ ನೀಡಿರುವ ದತ್ತಾಂಶಗಳನ್ನು ಮತ್ತೊಮ್ಮೆ ಪರಿಶೀಲಿಸುವುದು. |

| | | |
|---|---|---|
| | | 3. ಆಹಾರವನ್ನು ವಿತರಿಸದೇ ಇರುವ ಅಂಗನವಾಡಿ ಕೇಂದ್ರಗಳ ದತ್ತಾಂಶವನ್ನು ವಿಶ್ಲೇಷಿಸುವುದು.<br>4. ತಾಯಂದಿರು ಉತ್ತಮ ಆಹಾರ ಸೇವಿಸುತ್ತಿದ್ದರೂ, ಅವರು ರಕ್ತಹೀನತೆಯಿಂದ ಬಳಲುತ್ತಿರಲು ಸೂಕ್ತ ಕಾರಣಗಳನ್ನು ನೀಡುವುದು.<br>5. ರಾಜ್ಯಾದ್ಯಂತ ಯಾವುದೇ ಜಿಲ್ಲೆ, ತಾಲ್ಲೂಕು ಅಥವಾ ಹಳ್ಳಿಯಲ್ಲಿ ರಕ್ತಹೀನತೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳಲ್ಲಿ ಕೆಲವು ಅತ್ಯುತ್ತಮ ಮಾದರಿಯ ಬಗ್ಗೆ ಮಾಹಿತಿ ನೀಡುವುದು.<br>6. ಬಾಲ ವಿಕಾಸ ಸಮಿತಿಯ ದತ್ತಾಂಶಗಳನ್ನು ವರದಿಯಲ್ಲಿ ಸೇರಿಸುವುದು.<br>7. ರೆಫರಲ್‌ಗಾಗಿ ಅಂಗನವಾಡಿ ಕಾರ್ಯಕರ್ತೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ವಿವರಗಳನ್ನು ನೀಡುವುದು.<br>8. ಪ್ರಸ್ತುತ ಗರ್ಭಿಣಿಯರಿಗೆ ನೀಡುತ್ತಿರುವ Iron Folic Acid ಮಾತ್ರೆಗಳ ವಾಸನೆಯಿಂದ ಕೆಲವು ಮಹಿಳೆಯರಿಗೆ ಅಸಮಾಧಾನ ಇರುವುದರಿಂದ, ಸದರಿ ಮಾತ್ರೆಗಳಿಗೆ ಸಮನಾಗಿರುವ ಅಯುರ್ವೇದದ ಮಾತ್ರೆಗಳನ್ನು ನೀಡುವ ಪರ್ಯಾಯ ವ್ಯವಸ್ಥೆಯ ಕುರಿತು ಶಿಫಾರಸ್ಸಿನಲ್ಲಿ ಸೇರಿಸುವುದು. |
| 6 | Improving the productivity of Pigeonpea (TUR) in Karnataka with District and Taluk wise scientific analysis<br>**ಯೋಜನೆ ಅನುಷ್ಠಾನ ಇಲಾಖೆ:**<br>ಕೃಷಿ ಇಲಾಖೆ<br>**ಸಮಾಲೋಚಕ ಸಂಸ್ಥೆ:** IAT<br>**ಅಧ್ಯಯನದ ಅವಧಿ**<br>09-09-2022 ರಿಂದ 09-02-2023 | ಸಮಾಲೋಚಕ ಸಂಸ್ಥೆಯಿಂದ ಪರಿಷ್ಕೃತ ಕರಡು ಮೌಲ್ಯಮಾಪನ ವರದಿಯನ್ನು ಪ್ರಸ್ತುತ ಪಡಿಸಲಾಗಿ, ಈ ಕೆಳಕಂಡ ಸಲಹೆಗಳನ್ನು ನೀಡಲಾಯಿತು.<br>1. ರಾಷ್ಟ್ರದಲ್ಲಿ ಹೆಚ್ಚು ಉತ್ಪಾದನೆ ಇರುವ ರಾಜ್ಯಗಳ ಉತ್ತಮ ಕೃಷಿ ಪದ್ಧತಿಗಳನ್ನು ಗುರುತಿಸಿ ವರದಿಯಲ್ಲಿ ಅಳವಡಿಸುವುದು.<br>2. ರಾಜ್ಯದಲ್ಲಿ ಕಡಿಮೆ ಉತ್ಪಾದನೆ ಇರುವ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಿಗೆ ಜಿಲ್ಲಾವಾರು ಉತ್ತಮ ಕೃಷಿ ಪದ್ಧತಿಗಳನ್ನು ಶಿಫಾರಸ್ಸುಗಳನ್ನು ಅಳವಡಿಸುವುದು.<br>3. ತೊಗರಿ ಉತ್ಪಾದನೆಯಲ್ಲಿ ಕೀಟನಾಶಕ ಬಳಕೆ ಪ್ರಮಾಣ ಕಡಿತಗೊಳಿಸಿ ಉತ್ತಮ ಇಳುವರಿ ಪಡೆಯಲು ಸಮಗ್ರ ಪೋಷಕಾಂಶ ಪದ್ಧತಿ ಮತ್ತು ಸಮಗ್ರ ಕೀಟ ನಿರ್ವಹಣೆಯ ಮಾದರಿ ಪ್ರಾತ್ಯಕ್ಷತೆಗಳನ್ನು ಅಳವಡಿಸಲು ಮಾದರಿ ಪದ್ಧತಿ ಶಿಫಾರಸ್ಸು ಮಾಡುವುದು. |

| | | |
|---|---|---|
| | | 4. ಒಣ ಬೇಸಾಯ ಪದ್ಧತಿಯಲ್ಲಿ ಸೂಕ್ತ ಅಂತರ ಬೆಳೆ ಪದ್ಧತಿ ಗುರುತಿಸುವುದು.<br>5. ತೊಗರಿ ಬೆಳೆಯಲ್ಲಿ ಬೀಜ ಬದಲಿ ಅನುಪಾತವನ್ನು(Seed Replacement Ration-SRR) ಹಾಲಿ ಇರುವ ಶೇಕಡ 27 ರಿಂದ 45.5ರಷ್ಟು ಸಾಧಿಸಲು ಜರ್ಮ್ ಪ್ಲಾಸಮ್(Germplasam) ಲಭ್ಯತೆಯನ್ನು ಹೆಚ್ಚಿಸಲು ICRISAT ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೋಳ್ಳುವ ಬಗ್ಗೆ ವರದಿಯಲ್ಲಿ ಅಳವಡಿಸುವುದು.<br>6. ತೊಗರಿ ಬೆಳೆಯ ಹೊಸ ತಳಿಗಳನ್ನು ತ್ವರಿತವಾಗಿ ಜನಪ್ರಿಯಗೊಳಿಸಲು ಹೊಸ ತಳಿಗಳ ಬಿತ್ತನೆ ಬೀಜಗಳ ಕಿರುಚೀಲ ವಿತರಣೆ ಕುರಿತಂತೆ ಕ್ರಿಯಾಯೋಜನೆ ಅಳವಡಿಸುವುದು<br>7. ತೊಗರಿ ಬೆಳೆಯ ಮೌಲ್ಯವರ್ಧನೆಗೆ ಹೆಚ್ಚು ಪ್ರೋತ್ಸಾಹ ನೀಡಲು ರೂಪಿಸಿರುವ ಕಾರ್ಯತಂತ್ರಗಳಿಗೆ ಅವಶ್ಯ ಅನುದಾನ ಬೇಡಿಕೆಯನ್ನು ವರದಿಯಲ್ಲಿ ಅಳವಡಿಸುವುದು.<br>8. ತೊಗರಿ ಬೆಳೆಯ ಕಾಂಡಗಳ ಉಪಯುಕ್ತತೆ ಬಗ್ಗೆ ಮಾಹಿತಿಯನ್ನು ಪ್ರಾಧಿಕಾರದ ತಾಂತ್ರಿಕ ಸಮಿತಿಯ ಸದಸ್ಯ ತಜ್ಞರಾದ ಡಾ.ಅಯ್ಯಪ್ಪನ್‌ರವರಿಂದ ಮಾಹಿತಿ ವರದಿಯಲ್ಲಿ ಅಳವಡಿಸುವುದು.<br><br>ಅಂತಿಮವಾಗಿ, ಅಧ್ಯಯನದಲ್ಲಿ ನೀಡಿರುವ ಎಲ್ಲಾ ಶಿಫಾರಸ್ಸುಗಳಿಗೆ ಕಾರ್ಯರೂಪದ ಕ್ರಿಯಾಯೋಜನೆಯನ್ನು ಮತ್ತು ಅನುದಾನ ಬೇಡಿಕೆಯನ್ನು (Budget Requirement) ಅಳವಡಿಸಿ ಇಲಾಖೆಯು ನೀಡುವ ಅಭಿಪ್ರಾಯಗಳನ್ನು ವರದಿಯಲ್ಲಿ ಅಳವಡಿಸುವ ನಿಬಂಧನೆಗಳೊಂದಿಗೆ ಕರಡು ವರದಿಯನ್ನು ಅನುಮೋದಿಸಲಾಯಿತು. |

(ಡಾ.ರಿಚರ್ಡ್ ವಿನ್ಸೆಂಟ್ ಡಿಸೋಜ, ಭಾ.ಆ.ಸೇ.,)
ಸದಸ್ಯ ಕಾರ್ಯದರ್ಶಿಗಳು, ತಾಂತ್ರಿಕ ಸಮಿತಿ,
ಮತ್ತು ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೇಲ್ವಿಚಾರಣೆ & ಮೌಲ್ಯಮಾಪನ ಪ್ರಾಧಿಕಾರ

(ಡಾ.ಶಾಲಿನಿ ರಜನೀಶ್, ಭಾ.ಆ.ಸೇ.,)
ತಾಂತ್ರಿಕ ಸಮಿತಿಯ ಅಧ್ಯಕ್ಷರು ಹಾಗೂ ಸರ್ಕಾರದ ಅಪರ
ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ